ವಿಷಯ :- ಹುಬ್ಬಳ್ಳಿ-ಧಾರವಾಡದಲ್ಲಿ ಉಚ್ಛ ನ್ಯಾಯಾಲಯ ಪೀಠ ಪ್ರಾರಂಭಿಸುವ ಕುರಿತು.

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 941 (1881)

ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ- ಧಾರವಾಡದಲ್ಲಿ ಉಚ್ಛ ನ್ಯಾಯಾಲಯ ಪೀಠ ಪ್ರಾರಂಭಿಸಲು ಸರಕಾರದವರು ಕೈಗೊಂಡ ಕ್ರಮಗಳೇನು ;

ಆ) ಈ ಪೀಠವನ್ನು ಪ್ರಾರಂಭಿಸಲು ಇನ್ನು ಎಷ್ಟು ಕಾಲಾವಕಾಶ ಬೇಕಾಗುತ್ತದೆ?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :-

ಅ) ಪ್ರಪ್ರಥಮ ಬಾರಿಗೆ ಉಚ್ಛ ನ್ಯಾಯಾಲಯದ ಖಾಯಂ ಪೀಠವನ್ನು ಕೇಂದ್ರ ಸ್ಥಾನದ ಹೊರಗೆ ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದ ನಂತರ ಕೇಂದ್ರ ಸರ್ಕಾರವು ಇಂತಹ ಎಲ್ಲಾ ಮನವಿಗಳನ್ನು ಪರಿಶೀಲಿಸಲು ನೇಮಿಸಿದ ಜಸವಂತ್ ಸಿಂಗ್ ಆಯೋಗವು ಕೇಂದ್ರ ಸ್ಥಾನದಿಂದ ಹೊರಗೆ ಉಚ್ಛ ನ್ಯಾಯಾಲಯದ ಪೀಠವನ್ನು ಸ್ಥಾಪಿಸುವ ಬಗ್ಗೆ ಶಿಫಾರಸ್ಸು ಮಾಡಿರುತ್ತದೆ. ಸದರಿ ಆಯೋಗದ ಶಿಫಾರಸ್ಸಿನಲ್ಲಿನ ತತ್ವಗಳನ್ನು ಆಳವಡಿಸಿಕೊಳ್ಳಲು ದಿನಾಂಕ : 27-10-1987 ರಂದು ಸಚಿವ ಸಂಪುಟವು ಅನುಮೋದಿಸಿತು. ಹಾಗೂ ಸದರಿ ನಿರ್ಣಯದನ್ವಯ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು. ಕೇಂದ್ರ ಸರ್ಕಾರವು ರಾಜ್ಯ ಪುನರ್ ಸಂಘಟನೆ ಕಾಯ್ದೆ (State Re-organisation Act) 1956 ರ ಕಲಂ 51 (2) ರನ್ವಯ ಉಚ್ಛ ನ್ಯಾಯಾಲಯದ ಖಾಯಂ ಪೀಠವನ್ನು ಸ್ಥಾಪಿಸುವ ಮುನ್ನ ರಾಜ್ಯಪಾಲರ ಹಾಗೂ ಉಚ್ಛ ನ್ಯಾಯಾಲಯ ದೊಂದಿಗೆ ಸಮಾಲೋಚಿಸಿ ಪ್ರಸ್ತಾವನೆಯನ್ನು ಕಳುಹಿಸಿ ಕೊಡಲು ರಾಜ್ಯ ಸರ್ಕಾರಕ್ಕೆ ತಿಳಿಸಿತು. ಈ ದಿಸೆಯಲ್ಲಿ ಉಚ್ಛ ನ್ಯಾಯಾಲಯದ ಅಭಿಪ್ರಾಯವನ್ನು ಕೋರಲಾಗಿದ್ದು, ಉಚ್ಛ ನ್ಯಾಯಾಲಯದ ಖಾಯಂ ಪೀಠವೊಂದನ್ನು ಆದರ ಕೇಂದ್ರ ಸ್ಥಾನದಿಂದ ಹೊರಗೆ ಸ್ಥಾಪಿಸಿದಲ್ಲಿ ಉಚ್ಛ ನ್ಯಾಯಾಲಯದ ಸಮರ್ಥತೆಯನ್ನು ಕುಂದುಗೊಳಿಸುವ ಹಾಗೂ ರಾಜ್ಯದಲ್ಲಿನ ನ್ಯಾಯ ಪರಿಪಾಲನೆಯನ್ನು ಕೆಳಮಟ್ಟಕ್ಕಿಳಿಸುವ ಅನಿವಾರ್ಯ ಪರಿಣಾಮಗಳು ಉಂಟಾಗುವುದರಿಂದ ಕೇಂದ್ರ ಸ್ಥಾನದಿಂದ ಹೊರಗೆ ಉಚ್ಛ ನ್ಯಾಯಾಲಯದ ಪೀಠವೊಂದನ್ನು ಸ್ಥಾಪಿಸುವುದು ಅಪೇಕ್ಷಣೀಯವಲ್ಲ ಎಂದು ತಿಳಿಸಿದೆ. ತದನಂತರ ಉಚ್ಛ ನ್ಯಾಯಾಲಯ ಇದೇ ನಿರ್ಣಯವನ್ನು ತಿಳಿಸುತ್ತಾ ಬಂದಿರುತ್ತದೆ.

ಧಾರವಾಡದಲ್ಲಿ ಉಚ್ಚ ನ್ಯಾಯಾಲಯದ ಪೂರ್ಣಪೀಠವನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಸಚಿವಸಂಪುಟ ಹಾಗೂ ಉಭಯ ಸದನಗಳು ಅಂಗೀಕರಿಸಿದೆ. ಆದರೆ ಈ ದಿಶೆಯಲ್ಲಿ ಉಚ್ಚ ನ್ಯಾಯಾಲಯದ ಸಹಮತಿ ದೊರಕದೇ ಇರುವುದರಿಂದ ಉಚ್ಚ ನ್ಯಾಯಾಲಯದ ಪೀಠ ಸ್ಥಾಪನೆಗೆ ಅಡಚಣೆ ಉಂಟಾಗಿದೆ.

ಆ) ಕರ್ನಾಟಕ ಉಚ್ಚ ನ್ಯಾಯಲಯದ ಈಗಿನ ನಿಲುವನ್ನು ಮರು ಪರಿಶೀಲಿಸಿ ಸಹಮತಿಯನ್ನು ನೀಡಲು ಹಿಂದಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಮಾಧವ ಲಕ್ಷ್ಣ್ ಪೆಂಡ್ಸ್ ಅವರನ್ನು ಕೋರಿದ್ದು ಈ ಪ್ರಸ್ತಾವನೆಯನ್ನು ಮರು ಪರಿಶೀಲಿಸುವುದಾಗಿ ಅವರು ತಿಳಿಸಿದ್ದರು. ನೂತನವಾಗಿ ಅಧಿಕಾರ ವಹಿಸಿಕೊಂಡಿರುವ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ಶ್ರೀ ರಾಮಪ್ರಕಾಶ್ ಸೇಠಿಯವರನ್ನು ಉಚ್ಚ ನ್ಯಾಯಾಲಯದ ಸಹಮತಿಯನ್ನು ಶೀಘ್ರವಾಗಿ ನೀಡಲು ಮತ್ತೆ ಕೋರಲಾಗಿದೆ. ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ಧಾರಕ್ಕಾಗಿ ಕಾಯಲಾಗುತ್ತಿದೆ.

ವಿಷಯ :- ಕುಂದಾಪುರ ತಾಲ್ಲೂಕಿನಲ್ಲಿ ಸಮುದ್ರದ ಕೊರೆತ.

ಚುಕ್ಕಿ ಗುರುತಿನ ಪ್ರಶ್ನೆ ಸಂಖ್ಯೆ 944 (1869)

ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) :- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕು ಕೋಡಿಯಿಂದ ತೆಕ್ಕಟ್ಟೆವರೆಗೆ ಎಲ್ಲೆಲ್ಲಿ ಸಮುದ್ರ ಕೊರೆತ ಉಂಟಾಗಿದೆ?

ಆ) ಈ ಸಮುದ್ರ ಕೊರೆತ ತಡೆಯಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :-

ಅ) 1996 ರ ಸಾಲಿನಲ್ಲಿ ಈವರೆಗೆ ಕುಂದಾಪುರ ತಾಲ್ಲೂಕು ಕಸಬಾ ಕೋರಿಯಿಂದ ತೆಕ್ಕಟ್ಟೆವರೆಗೆ ಸಮುದ್ರ ಕೊರೆತ ಉಂಟಾಗಿಲ್ಲ. ಆದರೆ ಹಿಂದಿನ ವರ್ಷಗಳಲ್ಲಿ ಕಸಬಾಕೋಡಿಯಿಂದ ದಕ್ಷಿಣಕ್ಕೆ ಗೋಪಾಡಿ, ಬೀಜಾಡಿ, ಕೋರಾಡಿಗಳಲ್ಲಿ ಸಮುದ್ರ ಕೊರೆತ ಉಂಟಾಗಿತ್ತು.